ಕೇಳಿದ್ದಾರೆ, ಆದಷ್ಟು ತೀವ್ರಗತಿಯಲ್ಲಿ ಆ ದಾಸ್ತಾನನ್ನು ಮಾರಾಟ ಮಾಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ ಎಂದು ಹೇಳಬಯಸುತ್ತೇನೆ.

ರಾಜ್ಯದಲ್ಲಿರುವ ಕೈಮಗ್ಗ ನೇಕಾರರ ಸಹಕಾರಿ ಸಂಘಗಳು

೩೦೨೦. ಶ್ರೀ ಪಿ. ಸಿ. ಮುನಿಸ್ವಾಮಯ್ಯ (ದೇವನಹಳ್ಳಿ) —ಮಾನ್ಯ ಗಣಿ, ಭೂ ವಿಜ್ಞಾನ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಹಾಲಿ ಅಸ್ತಿತ್ವದಲ್ಲಿರುವ ಒಟ್ಟು ಕೈಮಗ್ಗ ನೇಕಾರ ಸಹಕಾರ ಸಂಘಗಳು ಎಷ್ಟು?

ಆ) ಇವುಗಳಲ್ಲಿ ನಿಷ್ಕ್ರಿಯವಾಗಿರುವ ಸಂಘಗಳು ಎಷ್ಟು, ಈ ಸಂಘಗಳ ನಿಷ್ಕ್ರಿಯದಿಂದಾಗಿ ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳು ಏನು ?

ಇ) ರಾಜ್ಯದಲ್ಲಿನ ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯದ ರೂಪದಲ್ಲಿ ಪುನಶ್ಚೇತನ ಕೊಟ್ಟು ನೇಕಾರರ ಅಭಿವೃದ್ಧಿಗಾಗಿ ಸರ್ಕಾರದವರು ಕೈಗೊಂಡ ಕಾರ್ಯಕ್ರಮಗಳು ಏನು ?

ಶ್ರೀ ರವೀಶ್ ಸಿ. ಜಿಗಜಿಣಗಿ (ಗಣಿ, ಭೂವಿಜ್ಞಾನ ಮತ್ತು ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು).—

ಅ) ೨೭೫.

ಆ) ೧೭೮.

ಇ) ಸಂಘಗಳ ಪುನರ್ ಸಂಘಟನೆ ಮೂಲಕ ಹಾಗೂ ಈ ಕೆಳಕಂಡ ಯೋಜನೆಗಳ ಮೂಲಕ ನೇಕಾರರ ಅಭಿವೃದ್ಧಿ ಕಾರ್ಯಕ್ರಮ ಹಾಕಿಕೊಂಡಿದೆ.

೧) ಸರ್ಕಾರದ ಪಾಲು ಬಂಡವಾಳ ಒದಗಿಸುವುದು.
೨) ಸಿಬ್ಬಂದಿ ವೆಚ್ಚ ಭರಿಸುವುದು.
೩) ಸಂಧಾರಿತ ಮಗ್ಗ ಮತ್ತು ಸಲಕರಣೆಗಳನ್ನು ಒದಗಿಸುವುದು.

ಶ್ರೀ ಪಿ.ಸಿ. ಮುನಿಸ್ವಾಮಯ್ಯ.—ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ರಾಜ್ಯದಲ್ಲಿ ಒಟ್ಟು ೨೭೫ ನೇಕಾರರ ಸಹಕಾರಿ ಸಂಘಗಳು ಇದ್ದು, ಅವುಗಳಲ್ಲಿ ೧೭೮ ಸಂಘಗಳು ನಿಷ್ಕ್ರಿಯವಾಗಿವೆ ಎಂದು ಹೇಳಿದ್ದಾರೆ. ಹಾಗಿದ್ದಲ್ಲಿ ಈ ೧೭೮ ಸಹಕಾರಿ ಸಂಘಗಳು ನಿಷ್ಕ್ರಿಯತೆಯ ಸ್ಥಿತಿಗೆ ತಲುಪಲು ಕಾರಣಗಳೇನು ? ಹೀಗೆ ಇವುಗಳು ನಿಷ್ಕ್ರಿಯವಾಗಿರುವುದರಿಂದಾಗಿ ಆ ಪ್ರದೇಶದ ನೇಕಾರರ ಸಹಸ್ರಾರು ಕುಟುಂಬಗಳು ಕಷ್ಟಕ್ಕೆ ಈಡಾಗಿದ್ದಾವೆ ಅದಕ್ಕೆ ಸರಕಾರದವರು ತೆಗೆದುಕೊಂಡ ಕ್ರಮಗಳು ಏನು ?

ಶ್ರೀ ರವೀಶ ಸಿ. ಜಿಗಜಿಣಗಿ.—ಮಾನ್ಯ ಅಧ್ಯಕ್ಷರೆ, ಈ ಸಹಕಾರ ಸಂಘಗಳು ರಾಜ್ಯದಲ್ಲಿ ನಿಷ್ಕ್ರಿಯವಾಗಲು ಇಂತಹದೇ ಕಾರಣ ಎಂದು ಹೇಳುವುದು ಕಷ್ಟವಾಗುತ್ತದೆ ಇಂಥ ಸಂಘಗಳನ್ನು ಪುನಃ ರೀ ಎಗರ್ನೈಸ್ ಮಾಡಬೇಕೆಂದು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಆದರೆ ಕೆಲವು ಸಹಕಾರ ಸಂಸ್ಥೆಗಳು ಈ ಬಗ್ಗೆ ಹೈಕೋರ್ಟಿನಲ್ಲಿ ತಡೆಯಾಜ್ಞೆಯನ್ನು ತಂದಿದ್ದಾರೆ. ಅಂಥ ತಡೆಯಾಜ್ಞೆ ತಂದಿರುವಂಥ ಸಂಸ್ಥೆಗಳನ್ನು ಬಿಟ್ಟು ಉಳಿದ ಸಹಕಾರಿ ಸಂಘಗಳಿಗೆ ಸರಕಾರವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಅವುಗಳಲ್ಲಿ ಸರ್ಕಾರದ ಪಾಲು ಬಂಡವಾಳವನ್ನು ಒದಗಿಸುವುದು, ಸಿಬ್ಬಂದಿ ವೆಚ್ಚ ಭರಿಸುವುದು, ಸಾಧಾರಿತ ಮಗ್ಗ ಮತ್ತು ಸಲಕರಣೆಗಳನ್ನು ಒದಗಿಸುವುದು ಮುಂತಾದವುಗಳು ಸೇರಿವೆ. This is under the moderni ation scheme. Efforts are being made to provide working capital under the NABARD Scheme also. ಮೇಲೆ ಹೇಳಿದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡುವುದರ ಜೊತೆಗೆ ಸಾಧ್ಯವಾದಷ್ಟು ಬೇಗ ಕೋರ್ಟಿನಲ್ಲಿರುವ ತಡೆಯಾಜ್ಞೆಯನ್ನು ಹಿಂತೆಗೆದುಕೊಳ್ಳುವಲ್ಲಿ ಯತ್ನಿಸಿ, ಈ ಸಹಕಾರ ಸಂಘಗಳಲ್ಲಿರುವ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಪಿ.ಸಿ. ಮುನಿಸ್ವಾಮಯ್ಯ – ಅಧ್ಯಕ್ಷರೇ, ಈ ಸಹಕಾರ ಸಂಘಗಳಲ್ಲಿ ನೇಕಾರವೃತ್ತಿಯಲ್ಲಿ ನಿರತರಾಗಿಲ್ಲದವರು, ಅನುಭವ ಇಲ್ಲದವರು, ಮುಂತಾದವರು ಸೇರಿಕೊಂಡು ಹಾಳುಮಾಡುತ್ತಾ ಇದ್ದಾರೆ ಈ ಬಗ್ಗೆ ಸರಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ ?

ಶ್ರೀ ರಮೇಶ್ ಸಿ. ಜಿಗಜಿಣಗಿ.—ಅಧ್ಯಕ್ಷರೆ, ಈ ನೇಕಾರರ ಸಹಕಾರ ಸಂಘಗಳಿಲ್ಲಿರಂಥ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಮಾಡಿದ್ದೇವೆ, ಕೋರ್ಟ್‌ನಲ್ಲಿ ತಡೆಯಾಜ್ಞೆ ಇರುವ ಕಾರಣ ಸ್ವಲ್ಪ ಸಮಸ್ಯೆ ಇದೆ. ಹೈಕೋರ್ಟ್‌ನಲ್ಲಿರುವ ತಡೆಯಾಜ್ಞೆಯನ್ನು ಹಿಂದೆಗೆದುಕೊಳ್ಳುವುದಕ್ಕೆ ಒತ್ತಾಯ ಮಾಡುತ್ತಾ ಇದ್ದೇವೆ.

ಮಂಗಳೂರು ತೈಲ ಶುದ್ಧೀಕರಣದ ಕಾರ್ಯಾಗಾರ

೪೦೩೦. ಶ್ರೀ ಬಿ. ಎ ಉಮರಬ್ಬ(ವಿಟ್ಲ).—ಮಾನ್ಯ ಭಾರಿ ಮಧ್ಯಮ ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳೂರು ಬಳಿ ಸ್ಥಾಪಿಸಲು ಯೋಚಿಸಿರುವ ತೈಲಶುದ್ಧೀಕರಣ ಕಾರ್ಯಾಗಾರ ಯಾವ ಹಂತದಲ್ಲಿದೆ ?

ಆ) ಇದಕ್ಕಾಗಿ ರಾಜ್ಯಸರ್ಕಾರದವರು ವಶಪಡಿಸಿಕೊಳ್ಳುವ ಭೂಮಿಯ ವಿಸ್ತೀರ್ಣವೆಷ್ಟು ?

ಇ) ಯಾವ ಯಾವ ಗ್ರಾಮದಲ್ಲಿ ಭೂಮಿಯನ್ನು ವಶಪಡಿಸಿಕೊಳ್ಳಲಾಗುತ್ತದೆ ; ಈ ಕಾರ್ಯ ಯಾವ ಹಂತದಲ್ಲಿದೆ ?

ಈ) ಈ ಉದ್ದೇಶಕ್ಕಾಗಿ ವಶಪಡಿಸಿಕೊಳ್ಳುವ ಖಾಸಗಿಯವರ ಭೂಮಿಗೆ ಸರ್ಕಾರ ನಿಗದಿ ಪಡಿಸಿರುವ ಪರಿಹಾರದ ಮೊತ್ತವೆಷ್ಟು ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಮಧ್ಯಮ ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ಸಂಯುಕ್ತ ಮಂಗಳೂರು ತೈಲ ಶುದ್ಧೀಕರಣ ಘಟಕದ ಸ್ಥಾಪನೆಗೆ ಕೇಂದ್ರ ಸರ್ಕಾರವು ಎಡೆ ಮಾಡಿಕೊಟ್ಟಿದೆ. ಮೇ ೧೯೬೯ರಲ್ಲಿ ಕೇಂದ್ರಸರ್ಕಾರ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ನಿಯಂತ್ರಿತ ಮತ್ತು ಇಂಡಿಯನ್ ರಿಫೈನರೀಸ್ ನಿಯಂತ್ರಿತ ಅವರುಗಳೊ ನ್ನೊಳಗೊಂಡಂತೆ ತ್ರಿ ಪಕ್ಷೀಯ ಒಪ್ಪಂದಕ್ಕೆ ಸಹಿ ಹಾಕಲಾಗಿದೆ ಈ ಉದ್ದೇಶಕ್ಕಾಗಿ ಮಂಗಳೂರು ತೈಲ ಶುದ್ಧೀಕರಣ ಮತ್ತು ಪೆಟ್ರೋಕೆಮಿಕಲ್ಸ್ ಎಂಬ ಹೊಸ ಕಂಪನಿಯನ್ನು ಸಂಘಟಿಸಲಾಗಿದೆ, ವಿವರವಾದ ಟೆಕ್ನೋ ಎಕನಾಮಿಕ್ಸ್ ಫೀಸಬಿಲಿಟಿ ವರದಿಯನ್ನು ರೂ. ೩೦ ಕೋಟಿಯ ವೆಚ್ಚದಲ್ಲಿ (ವಿದೇಶಿ ನಾಣ್ಯದ ಸದ್ಭತಿಯಲ್ಲಿ) ಏರ್ಪಾಡು ಮಾಡಲಾಗಿದೆ. ಕೇಂದ್ರ ಸರ್ಕಾರವು ಈ ಕಂಪನಿಗೆ ಅಧಿಕಾರಿಗಳನ್ನು ಒದ್ದಿಗೆ ನೀಡಿದೆ. ವರದಿಗಳನ್ನು ತಯಾರಿಸಲು ಮೆ. ಲೋಮನ್ ಕೈಸ್ಲ್ ಅವರನ್ನೂ ಸಮಾ ಲೋಚಕರನ್ನಾಗಿ ಯೊ ಜನಾ ಅಧಿಕಾರಿಗಳು ನೇಮಕ ಮಾಡಿರುತ್ತಾರೆ. ಮತ್ತು ಈ ವರದಿಯು ಜನವರಿ ೧೯೭೦ರ ವೇಳೆಗೆ ದೊರಕುವ ಭರವಸೆ ಇದೆ ಮತ್ತು ಮೇ ; ಜೂನ್ ೧೯೭೦ರ ವೇಳೆಗೆ ಈ ಘಟಕದ ಕಾರ್ಯಗತ ಅಂತಿಮ ತೀರ್ಮಾನ ದೊರಕಲಿದೆ.

ಆ) ೨೩೭೧.೩೯ ಎಕರೆಗಳು

ಇ) ಈ ಕೆಳಗೆ ನಮೂದಿಸಲ್ಪಟ್ಟಿರುವ ಮಂಗಳೂರು ತಾಲ್ಲೂಕಿನ ಹಳ್ಳಿಗಳ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ, ಕುತ್ತೆತೂರು, ತೋಕೂರು ಕಾಳವಾರ, ಬಾಲ, ಪೆರ್ಮುಡೆ ಸರ್ಪಾಡಿ, ಕೂಳೂರು, ಬೈಕಂಪಾಡಿ ಚಿಲ್ಮಾರ. ಈಗಾಗಲೇ ೧೭೦೪.೪೬ ಎಕರೆ ಜಮೀನನ್ನು ವಶಪಡಿಸಿಕೊಳ್ಳುವ ಬಗ್ಗೆ ಅಂತಿಮ ಅಧಿಸೂಚನೆಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿ ಕಾಯ್ದೆ ಅನ್ವಯ ಹೊರಡಿಸಲಾಗಿದ್ದು ಉಳಿದ ೬೬೩.೯೩ ಎಕರೆ ಹೆಚ್ಚುವರಿ ಜಮೀನನ್ನು ವಶಪಡಿಸಿಕೊಳ್ಳುವ ವಿಷಯ ಪರಿಶೀಲನೆಯಲ್ಲಿದೆ.